ಹನಿ



## ‘ವಿನ್ನರ್’ ಆಫ್ರಿದಿ

**ಈ** ಸಲದ ವಿಶ್ವಕಪ್ ಕ್ರಿಕೆಟ್ ಆರಂಭವಾಗುವಾಗ ಪಾಕಿಸ್ತಾನ ತಂಡ ಕ್ವಾರ್ಟರ್ ಫೈನಲ್ ಕೂಡಾ ತಲುಪಲಿಕ್ಕಿಲ್ಲ ಎಂಬ ವಾತಾವರಣ ಇತ್ತು. ವಿಶ್ವಕಪ್ ಆರಂಭಕ್ಕೆ ಮುನ್ನ ತಂಡದ ಮೂವರು ಪ್ರಮುಖ ಆಟಗಾರರು ಸ್ಪಾಟ್ ಫಿಕ್ಸಿಂಗ್ ಆರೋಪ ಎದುರಿಸಿ ತಂಡದಿಂದ ಔಟ್ ಆಗಿದ್ದರು. ತಂಡದ ಪ್ರಮುಖ ಬೌಲರ್ ಶೋಯಬ್ ಅಖ್ತರ್ ಗಾಯಗೊಂಡು, ಫಾರ್ಮ್ ಕಳೆದುಕೊಂಡಿದ್ದ. ಆದರೆ ತಂಡ ಸೆಮಿಫೈನಲ್‌ವರೆಗೂ ತಲುಪಿ, ಭಾರತದ ವೀರೋಚಿತ ಹೋರಾಟದ ಎದುರು ಮಣಿದು ಟೂರ್ನಿಯಿಂದ ಹೊರಬಿದ್ದಿದೆ. ಕಪ್ ಗೆಲ್ಲದಿದ್ದರೂ ತಂಡದ ನಾಯಕನಾಗಿ ಶಾಹಿದ್ ಅಫ್ರಿದಿ ಕ್ರಿಕೆಟ್ ಅಭಿಮಾನಿಗಳ ಮನ ಗೆದ್ದಿದ್ದಾರೆ. ತಂಡವನ್ನು ಸೆಮಿಫೈನಲ್‌ವರೆಗೂ ತಂದದ್ದೇ ಅಲ್ಲದೆ, ವೈಯಕ್ತಿಕವಾಗಿಯೂ ಅದ್ಭುತ ಬೌಲಿಂಗ್ ನಡೆಸಿ, ಅತ್ಯಧಿಕ ವಿಕೆಟ್ ಗಳಿಸಿದ ಆಫ್ರಿದಿ ಮಿಂಚಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಭಾರತ ವಿರುದ್ಧದ ಪಂದ್ಯದಲ್ಲಿ ಭಾವಾವೇಶಕ್ಕೆ ಒಳಗಾಗದೆ, ಸಜ್ಜನಿಕೆಯ ಆಟ ಪ್ರದರ್ಶಿಸಿದ ತಂಡದ ಸನ್ನಡತೆಗೆ ಆಫ್ರಿದಿಯ ಪ್ರೌಢ ನಾಯಕತ್ವವೇ ಕಾರಣ ಎನ್ನಲಾಗುತ್ತಿದೆ.

1996ರಲ್ಲಿ ಪ್ರಮುಖ ಬೌಲರ್ ಮುಷ್ತಾಕ್ ಅಹ್ಮದ್ ಗಾಯಗೊಂಡಿದ್ದಾಗ, ಅಕಸ್ಮಾತ್ತಾಗಿ ಏಕದಿನ ತಂಡಕ್ಕೆ ಲೆಗ್‌ಸ್ಪಿನ್ನರ್ ಆಗಿ ಪ್ರವೇಶ ಪಡೆದವನು ಆಫ್ರಿದಿ. ಆಗಿನ್ನೂ ಆತನಿಗೆ 16. 98ರಲ್ಲಿ ಟೆಸ್ಟ್ ತಂಡಕ್ಕೆ ಪ್ರವೇಶ. ಆಫ್ರಿದಿಯ ಮೊದಲ ಒಲವು ಬೌಲಿಂಗ್; ಆದರೆ ವಿಶ್ವಖ್ಯಾತಿ ತಂದುಕೊಟ್ಟದ್ದು ಬ್ಯಾಟಿಂಗ್! ಇವತ್ತಿಗೂ ಏಕದಿನದ ಪಂದ್ಯಗಳಲ್ಲಿ (ಒಡಿಐ) ಆಫ್ರಿದಿಯ ಹೆಸರಲ್ಲಿ ಇರುವಷ್ಟು ದಾಖಲೆಗಳು ಇನ್ಯಾವ ಬ್ಯಾಟ್ಸ್‌ಮನ್ ಹೆಸರಲ್ಲೂ ಇಲ್ಲ. ಅತ್ಯಂತ ವೇಗದ ಒಡಿಐ ಶತಕದ ವಿಶ್ವದಾಖಲೆ ಇರುವುದು ಆಫ್ರಿದಿ ಹೆಸರಲ್ಲಿ. ಒಡಿಐನಲ್ಲಿ ಅತ್ಯಧಿಕ ಒಂದೇ ಓವರ್‌ನಲ್ಲಿ 32 ರನ್ ಹೊಡೆದ ದಾಖಲೆ, ಎರಡನೇ ಅತ್ಯಧಿಕ ಒಟ್ಟು ರನ್ ಹೊಡೆದ ದಾಖಲೆ, ಅತ್ಯಧಿಕ ಸಿಕ್ಸರ್‌ಗಳನ್ನು ಸಿಡಿಸಿದ ದಾಖಲೆಯೂ ಆಫ್ರಿದಿಯದ್ದೇ.

2009ರ ಜೂನ್‌ನಲ್ಲಿ ಏಕದಿನ ತಂಡದ ನಾಯಕನಾದ ಆಫ್ರಿದಿ ಮೈದಾನದಲ್ಲಿ ಎದುರಾಳಿಗಳಿಗೆ ಸಿಂಹಸ್ವಪ್ನ. ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಮೂರರಲ್ಲೂ ಅದ್ವಿತೀಯ. ಆಫ್ರಿದಿ ಬುಡಕಟ್ಟಿನ ಈ ಸುಂದರಾಂಗ, ಐಪಿಎಲ್‌ನ ಯಾವುದೇ 20:20 ತಂಡಕ್ಕೆ ಆಯ್ಕೆಯಾದರೂ ಕ್ರಿಕೆಟ್‌ನ ಸೊಬಗು ಹೆಚ್ಚುವುದು ಖಂಡಿತಾ.

## ‘ಸಿಎಂ’ ಮಮತಾ?

**ಹ**ಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಪ್ರಚಾರ ನಡೆಯುತ್ತಿದ್ದರೂ ಎಲ್ಲರ ಕಣ್ಣು ಇರುವುದು ಪಶ್ಚಿಮ ಬಂಗಾಳದ ಮೇಲೆ. ಕಳೆದ 34 ವರ್ಷಗಳಿಂದ ಬಂಗಾಳವನ್ನು ಆಳುತ್ತಿರುವ ಎಡರಂಗದ ಕೈಯಿಂದ ಮಮತಾ ಬ್ಯಾನರ್ಜಿ ಅಧಿಕಾರ ಕಿತ್ತುಕೊಂಡು ಬಂಗಾಳದ ಮುಖ್ಯಮಂತ್ರಿ ಆಗುತ್ತಾರೆಯೆ.. ಎನ್ನುವುದೀಗ ಎಲ್ಲರ ಕುತೂಹಲದ ಪ್ರಶ್ನೆ. ಜನರ ನಿರೀಕ್ಷೆಗೆ ತಕ್ಕಂತೆ ಪೂರ್ವಭಾವಿ ಸಮೀಕ್ಷೆಗಳೆಲ್ಲ ಮಮತಾ ಮುನ್ನಡೆಯ ಸುದ್ದಿ ಬಿತ್ತರಿಸುತ್ತಿವೆ. ಕಾಂಗ್ರೆಸ್ ಜತೆಗೆ ಈಗಾಗಲೆ ಸೀಟು ಹೊಂದಾಣಿಕೆ ಮಾಡಿರುವ ಮಮತಾ ‘ದೀದಿ’, ಎಡಪಕ್ಷಗಳ ಪ್ರಚಾರಕ್ಕೆ ಹೊರಟಿರುವ ಕ್ರಿಕೆಟಿಗ ಸೌರವ್ ಗಂಗೂಲಿಯ ಸಹಿತ ಎಲ್ಲ ವಿರೋಧಿಗಳ ಮೇಲೆ ಭಾಷಣಗಳ ಕೆಂಡ ಕಾರತೊಡಗಿದ್ದಾರೆ.

ಮಮತಾ ಹುಟ್ಟಿದ್ದು (5-1-55) ಕೆಳಮಧ್ಯಮ ವರ್ಗದ ಕುಟುಂಬದಲ್ಲಿ. ಸಹಜವಾಗಿಯೇ ಶೋಷಿತರ, ಬಡವರ ಜತೆಗಿನ ಸಖ್ಯ. ಕಾಲೇಜು ದಿನಗಳಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಕಾರಿನ ಬಾನೆಟ್ ಹತ್ತಿ



ಸುದ್ದಿ ಮಾಡಿದ್ದ ಮಮತಾ, ಯುವಕಾಂಗ್ರೆಸ್ ನಾಯಕಿಯಾಗಿ ಬೆಳೆದರು. ಹದಿಹರೆಯದಲ್ಲೇ ಯುವಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾದರು. ನೋಡುತ್ತಿದ್ದಂತೆಯೇ ಕಾಂಗ್ರೆಸ್‌ನ ಹಿರಿಯ ನಾಯಕರನ್ನೂ ಮೀರಿ ಬೆಳೆದು, ಪಕ್ಷವನ್ನೂ ತ್ಯಜಿಸಿ ತೃಣಮೂಲ ಕಾಂಗ್ರೆಸ್ ಎಂಬ ಹೊಸ ಪಕ್ಷ ಕಟ್ಟಿ ಇತಿಹಾಸ ನಿರ್ಮಿಸಿದರು. ‘ಏಕ್ ಮಾರ್ ದೋ ತುಕ್ಡಾ’ ಮಾದರಿಯ ಮಮತಾ ರಾಜಕೀಯದಿಂದ ಎಡರಂಗ ಕಂಗಾಲಾಗಿರುವುದಂತೂ ನಿಜ.

ದೀದಿ ಕೈಯಲ್ಲಿ ಚುನಾವಣೆಯಲ್ಲಿ ಖರ್ಚು ಮಾಡಲು ಹಣವಿಲ್ಲವಂತೆ. ಅದಕ್ಕೆಂದೇ ಪಕ್ಷದ ಕಾರ್ಯಕರ್ತರು ದೀದಿ ಬಿಡಿಸಿದ ಪೇಂಟಿಂಗ್‌ಗಳನ್ನು ಹರಾಜು ಹಾಕಲು ನಿರ್ಧರಿಸಿದ್ದಾರೆ. ಈಗಾಗಲೆ ನ್ಯೂಜಿಲೆಂಡ್, ಆಸ್ಟ್ರೇಲಿಯಾದಿಂದ ಪೇಂಟಿಂಗ್ ಖರೀದಿಗೆ ಬೇಡಿಕೆ ಬಂದಿದೆಯಂತೆ. ಇಂತಹ ಗಿಮಿಕ್‌ಗಳಲ್ಲೂ ಎಡರಂಗವನ್ನು ಮೀರಿಸಿರುವ ಮಮತಾ, ಮುಂದಿನ ಸಿಎಂ ಆದರೂ ಅಚ್ಚರಿಯಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65